# ಆರೇನ ಮಾಡುವರು ಆರಿಂದಲೇನಹುದು

(Version 1)

1. **Ref.:** This is from the book: Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Note:** The wordings are as per the book in Ref. 1 above. The wordings in the book in Ref. 1 above and that of the singer are completely matching.

ರಾಗ ಮುಖಾರಿ ಝಂಪೆ ತಾಳ

ಆರೇನು ಮಾಡುವರು ಆರಿಂದಲೇನಹುದು
ಪೂರ್ವ ಜನ್ಮದ ಕರ್ಮ ವಿಧಿ ಬೆನ್ನ ಬಿಡದು || ಪ ||

ಊರೆಲ್ಲ ನಂಟರು ಉಣಬಡಿಸುವವರಿಲ್ಲ
ಬಾಯಾರಿ ಹೋದರೆ ಕೆರೆ ಬತ್ತಿತು
ತಾಯಿ ಸೋದರರೆಂದು ಹಾರೈಸಿ ಹೋದರೆ
ದೂರದಲ್ಲಿ ನೋಡಿ ನಗುತಾರೆ ಕೃಷ್ಣ || 1 ||

ಹಸಿದು ನಂಟರ ಮನೆಗೆ ಉಣಲಿಕ್ಕೆ ಹೋದರೆ
ಹಸಿವರಿತು ಎನ್ನ ಸಲಹುವರ ಕಾಣೆ
ರಸದಾಳಿಯ ಕಬ್ಬು ಮೆಲಲೆಂದು ಹೋದರೆ
ವಿಷವಾಗಿ ಬಾಯಿಗೆ ತೋರುತಿದೆ ಕೃಷ್ಣ || 2 ||

ಮರದ ನೆರಳು ಎಂದು ಮರದಡಿಗೆ ಹೋದರೆ
ಉರಿದು ಧಗ ಧಗನೆ ಕೆಂಡಗಳಾದವು
ಹರಿವ ನೀರೆಂದು ನಾ ನೀರ ಕುಡಿಯ ಹೋದರೆ
ತೊರೆ ಬತ್ತಿ ಬಚ್ಚಲಾಯಿತು ಕೇಳೋ ಕೃಷ್ಣ || 3 ||

ಮನಕೆ ಬಾರದ ಹೆಣ್ಣು ಮನೆಗೆ ಹಬ್ಬಿದ ಬಳ್ಳಿ
ಮನವರಿತು ನಡೆಯದ ಮನುಜ ಸಂಗ
ಎನಗೆ ನೀ ಗತಿಯೆಂದು ದೃಢವಾಗಿ ನಂಬಿರಲು

ಎನ್ನ ನಡು ನೀರಿನೊಳು ಕೈ ಬಿಡುವರೇ ಕೃಷ್ಣ || 4 ||

ನಡೆವುದಕೆ ಕಾಲಿಲ್ಲ ಕೊಡುವುದಕೆ ಧನವಿಲ್ಲ
ನುಡಿವ ನಾಲಿಗೆಯ ಹರಣವು ಗುಂದಿತು
ಬಡವರಾಧಾರಿ ಶ್ರೀ ಪುರಂದರ ವಿಠ್ಠಲನ
ಚರಣವನು ನೆರೆ ನಂಬಿ ಸುಖಿಯಾಗು ಮನವೇ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

**ಹರಣ** = ಪ್ರಾಣದ ತದ್ಭವ, ಬಲ

**Classification:** Keerthane
**Ankita:** sri purandara vittala
**Location:** NA
**Category:** Jeevana Darshana, Virakti
**Group Words:** karma, janma, vidhi, tayi, Krishna, hasivu, bandu, nalige, rokka, badava, niru, sukha
**Pravachana:** NA